ಕ್ರಮಗಳನ್ನು ಕೈಗೊಳ್ಳಬಹುದು. ಇಲ್ಲದೇ ಹೋದರೆ ಹೈಕೋರ್ಟಿಗೆ ಹೋಗುವ ಸಂಭವವಿರುವುದರಿಂದ, ಮಾನ್ಯ ಸದಸ್ಯರು ಸೂಚಿಸಿದಂತೆ ಅಲ್ಲಿರುವ ಕೋ-ಆರ್ಡಿನೇಟರ್ ಜೊತೆ ಮಾತನಾಡಿ ಕ್ರಮ ಕೈಗೊಳ್ಳುತ್ತೇನೆ.

ವಿಷಯ: ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಸುಧಾರಣೆ.

232 (1621)

ಶ್ರೀಮತಿ ಡಿ.ಜಿ.ಹೇಮಾವತಿ (ಶಾಂತಿನಗರ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಾಣಿವಿಲಾಸ ಆಸ್ಪತ್ರೆ, ಬೆಂಗಳೂರು ಇಲ್ಲಿ ಇರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಆ) ಹೊರರೋಗಿಗಳ ಘಟಕವು ಪ್ರತಿ ದಿನವು ಕಾರ್ಯ ನಿರ್ವಹಿಸುತ್ತಿರುವುದೇ?

ಇ) ಮೇಲಿನ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುವ ವೈದ್ಯರ ಸಂಖ್ಯೆ ಎಷ್ಟು ಮತ್ತು ವೈದ್ಯರ ಹಾಗೂ ಶುಶ್ರೂಷಕರ ಕೊರತೆ ಇದೆಯೇ?

ಈ) ಸದರಿ ಆಸ್ಪತ್ರೆಯಲ್ಲಿ ಸುಸಜ್ಜಿತ ಉಪಕರಣದೊಂದಿಗೆ ಸಾಕಷ್ಟು ಪ್ರಸೂತಿ ವಾರ್ಡ್ ಮತ್ತು ಶಸ್ತ್ರ ಚಿಕಿತ್ಸಾ ಕೊಠಡಿ ಇದೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಉ) ಈ ಆಸ್ಪತ್ರೆಗೆ 1997-98ರಲ್ಲಿ ಉತ್ತಮ ಸೌಲಭ್ಯವನ್ನು ಒದಗಿಸಲು ಖರ್ಚು ಮಾಡಲಾಗಿರುವ ಹಣವೆಷ್ಟು?

ಡಾ: ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) 536.

ಆ) ಹೌದು.

ಇ) ವಾಣಿವಿಲಾಸ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರು - 15

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರ ಸಂಖ್ಯೆ - 26

41

ಈ ಆಸ್ಪತ್ರೆಯಲ್ಲಿ ವೈದ್ಯರ ಮತ್ತು ಶುಶ್ರೂಷಕರ ಕೊರತೆ ಇರುವುದಿಲ್ಲ.

ಈ) ಹೌದು. ಸುಸಜ್ಜಿತವಾದ ಉಪಕರಣ ಹಾಗೂ ಶಸ್ತ್ರಚಿಕಿತ್ಸಾ ಕೊಠಡಿ ಮತ್ತು ಸಾಕಷ್ಟು ಪ್ರಸೂತಿವಾರ್ಡ್ ಅನುಕೂಲಗಳನ್ನು ಒದಗಿಸಿರುತ್ತದೆ.

1997-98ರಲ್ಲಿ ಸರಬರಾಜು ಮಾಡಲಾಗಿರುವ ಉಪಕರಣಗಳು -

1. ಆಪರೇಟಿವ್ ಮೈಕ್ರೋಸ್ಕೋಪ್
2. ಫೀಟಲ್ ಮಾನಿಟರ್
3. ಅಲ್ಟ್ರಾಸೌಂಡ್ ಯೂನಿಟ್
4. ಫಲ್ಸ್ ಆಕ್ಸಿಮೀಟರ್
5. ಕಾರ್ಡಿಯಾಕ್ ಮಾನಿಟರ್ (2)
6. ಆಪರೇಟಿವ್ ವೆಂಟಿಲೇಟರ್ (2)
7. ಅಡಲ್ಟ್ ಅಂಡ್ ಪೀಡಿಯಾಟ್ರಿಕ್ ವೆಂಟಿಲೇಟರ್ (5)
8. ಡಿಫಬ್ರೇಟರ್ಸ್ (1)

ಉ) 1997-98ನೇ ಸಾಲಿನಲ್ಲಿ ಈ ಆಸ್ಪತ್ರೆಗೆ ಉತ್ತಮ ಸೌಲಭ್ಯವನ್ನು ಒದಗಿಸಲು ಸಲಕರಣೆ ಔಷಧಿ, ಹಾಸಿಗೆ, ಹೊದಿಕೆಗಳು ಹಾಗೂ ಪಥ್ಯಾಹಾರಕ್ಕಾಗಿ ರೂ.95.00 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಶ್ರೀಮತಿ ಡಿ.ಜಿ.ಹೇಮಾವತಿ: ಪ್ರೈವೇಟ್ ಹಾಸ್ಪಿಟಲ್‌ಗಳಲ್ಲಿ ಬಹಳ ಒಳ್ಳೆಯ ಮಾಡರ್ನ್ ಎಕ್ವಿಪ್‌ಮೆಂಟ್‌ಗಳಿವೆ. ನಮ್ಮ ಗೌರ್ನಮೆಂಟ್ ಹಾಸ್ಪಿಟಲ್‌ಗಳಲ್ಲೂ ಮಾಡರ್ನ್ ಎಕ್ವಿಪ್‌ಮೆಂಟ್‌ಗಳು ಬೇಕು ಎಂದು ಕೇಳುತ್ತೇನೆ.

ಡಾ: ಎಂ.ಶಂಕರನಾಯಕ್: ಮಾಡರ್ನ್ ಎಕ್ವಿಪ್‌ಮೆಂಟ್‌ಗಳನ್ನು ಏನೇನು ಖರೀದಿಸಿದ್ದೇವೆಂಬುದನ್ನು ಉತ್ತರದಲ್ಲಿ ಹೇಳಿದ್ದೇವೆ. ವಾಣಿ ವಿಲಾಸ ಆಸ್ಪತ್ರೆಯಲ್ಲಿ ಆಪರೇಟೀವ್ ಮೈಕ್ರೋಸ್ಕೋಪ್, ಫೀಟಲ್ ಮಾನಿಟರ್, ಅಲ್ಟ್ರಾಸೌಂಡ್ ಫಲ್ಸ್ ಆಕ್ಸಿಮೀಟರ್, ಕಾರ್ಡಿಯಾಕ್ ಮಾನಿಟರ್-2, ಅಡಲ್ಟ್ ಅಂಡ್ ಪೀಡಿಯಾಟ್ರಿಕ್ ವೆಂಟಿಲೇಟರ್-2, ಡಿಫ್ಯಬ್ರಿಲೇಟರ್‌ಗಳನ್ನು ಒದಗಿಸಲಾಗಿದೆ.

Subject: Number of students appeared for VIIth standard Examination.

233 (1346)